ಚೇರ್‌ಮೆನ್: ಮಾನ್ಯ ವಾಟಾಳ್ ನಾಗರಾಜ್‌ರವರೇ ಪ್ರಶ್ನೋತ್ತರ, ವೇಳೆಯಲ್ಲಿ ವಾಕ್‌ಔಟ್ ಮಾಡತಕ್ಕಂಥ ಸಂಪ್ರದಾಯ ಇಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಇದು ಹೊಸ ಪದ್ಧತಿಯಾಗುತ್ತದೆ. ಇದರಬಗ್ಗೆ ಚರ್ಚೆ ಮಾಡೋಣ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ವಿಷಯ: ಹೇಮಾವತಿ ಮುಖ್ಯ ನಾಲೆಯ ಕಾಮಗಾರಿ.

540 (3975)

ಶ್ರೀ ಜಿ.ಎಸ್.ಶಿವನಂಜಪ್ಪ (ಗುಬ್ಬಿ): ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಮುಖ್ಯ ನಾಲಾ ಕಾಮಗಾರಿಗಳಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸುವಾಗ ರ್‍ಯಾಂಪನ್ನು ಸೇರಿಸಿ ತಯಾರಿಸಲಾಗುತ್ತಿದೆಯಲ್ಲವೆ?

ಆ) ಹೀಗಿರುವಾಗ ಮತ್ತೆ ರ್‍ಯಾಂಪ್ ಮಾಡಲು ಬೇರೆ ಅಂದಾಜು ಪಟ್ಟಿ ತಯಾರಿಸಿ ಹಣವನ್ನು ಗುತ್ತಿಗೆದಾರರಿಗೆ ನೀಡುತ್ತಿರುವುದು ಸರಿಯೇ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):

ಅ) ಹೌದು.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ (ಶ್ರೀ ಜಿ.ಎಸ್.ಶಿವನಂಜಪ್ಪನವರ ಪರವಾಗಿ): ಮಾನ್ಯ ಚೇರ್‌ಮನ್‌ರವರೆ, ಹೇಮಾವತಿ ನಾಲೆ ಕಾಮಗಾರಿ ಆಗಬೇಕಾದರೆ ಅದರಲ್ಲಿ ರ್‍ಯಾಂಪ್‌ನ್ನು ಎಸ್ಟಿಮೇಟ್‌ನಲ್ಲಿ ಸೇರಿಸಿ ಮಾಡಿಸುತ್ತೀರಾ ಎಂದು ಕೇಳಿರುವುದಕ್ಕೆ ''ಹೌದು'' ಎಂದು ಹೇಳಿದ್ದಾರೆ. ಆದರೆ ನಮಗೆ ಇರತಕ್ಕಂಥ ಮಾಹಿತಿ ಪ್ರಕಾರ ಅಲ್ಲಿ ಏನಾದರೂ ಕಾಮಗಾರಿ ಆಗಿ ಡೀಪ್ ಕಟ್‌ನಲ್ಲಿ ಮಾಡಬೇಕಾದರೆ ಅಲ್ಲಿ ಕೆಲಸ ಮಾಡುವ ಕಂಟ್ರಾಕ್ಟ್‌ನವರಿಗೆ ಲಿಫ್ಟ್ ಕೊಡುವುದು, ಲೀಡ್ ಕೊಡುವುದು ಅಲ್ಲಿಂದ ಅವರು ತೆಗೆದುಕೊಂಡು ಹೋಗಿಬಿಟ್ಟು ಸಿಲ್ಟ್‌ನ್ನು ಆಚೆ ಹಾಕುವುದಕ್ಕೆ ಹೆಚ್ಚುವರಿ ಹಣವನ್ನು ಎಸ್ಟಿಮೇಟ್‌ನಲ್ಲಿ ಸೇರಿಸುವುದು. ಅದಾದನಂತರ ಕೆಲವರಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಲ್ಲಿ ರ್‍ಯಾಂಪ್‌ಗೆ ಪ್ರಾವಿಷನ್ ಮಾಡಿಕೊಂಡಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ತಾವು ಏನಾದರೂ ಈ ರೀತಿಯಲ್ಲಿ ಎಸ್ಟಿಮೇಟ್‌ನಲ್ಲಿ ಸೇರಿಸಿ ಮಾಡಿದ್ದರೆ ಸರಿ, ಎಸ್ಟಿಮೇಟ್‌ನಿಂದ ಹೊರತಾಗಿ ರ್‍ಯಾಂಪ್‌ಗೆ ಪೇಮೆಂಟ್ ಆಗಿರುವ ಹಣ ಎಷ್ಟಿದೆ

ಎಂದು ತಾವು ಹೇಳಬೇಕು.

ಶ್ರೀ ಹೆಚ್.ಎನ್.ನಾಗೇಗೌಡ: ನಾವು ಕ್ಯಾಂಪ್ ಮಾಡತಕ್ಕಂಥಾದ್ದು ಡೀಪ್ ಕಟ್ ಎಲ್ಲಿ ನಾಲೆ ಹೋಗುತ್ತದೆ ಅಥವಾ ಸಿ.ಡಿ.ವರ್ಕ್ಸ್ ಎಲ್ಲಿದೆ, ಕೆಳಗಡೆ ಇಳಿದು ಲಾರಿ, ಜನರು ಕೆಲಸ ಮಾಡುವುದಕ್ಕೆ ದಾರಿ ಮಾಡಿಕೊಡತಕ್ಕಂಥಾದ್ದಕ್ಕೆ ರ್ಯಾಂಪ್ ಎಂದು ಹೆಸರು. ಈ ರ್ಯಾಂಪ್ ಕೊಡತಕ್ಕಂಥಾದ್ದು ಓರಿಜಿನಲ್ ಎಸ್ಟಿಮೇಟ್‌ನಲ್ಲಿ ಬಹಳ ಪಾಲು ಇರುತ್ತದೆ. ಒಂದು ಪಕ್ಷ ಡೀಪ್ ಕಟ್ ಎಲ್ಲಾದರೂ ಅಡಿಷನಲ್ ಆಗಿ ಸೇರಿದಂತಹ ಕಾಲದಲ್ಲಿ ಅಥವಾ ರ್ಯಾಂಪ್ ಮಾಡಲೇಬೇಕು ಎಂದು ಬಂದಂತಹ ಕಾಲದಲ್ಲಿ ಸಂಬಂಧಪಟ್ಟಂತಹ ಚೀಫ್ ಇಂಜಿನಿಯರ್ ಅನುಮತಿ ತೆಗೆದುಕೊಂಡು ಮಾಡುತ್ತಾರೆ. ಏನಾದರೂ ಎಸ್ಟಿಮೇಟ್ ಒಳಗೆ ಸೇರಿಸಿದೆ, ಅದರ ಅವಶ್ಯಕತೆ ಇಲ್ಲದೆ ಅಡಿಷನಲ್ ಆಗಿ ಮಾಡಿ ಅದಕ್ಕೆ ದುಡ್ಡು ತೆಗೆದುಕೊಂಡಿದ್ದಾರೆ ಎನ್ನುವ ಮಾಹಿತಿ ಇದ್ದರೆ ಅದನ್ನು ಮಾನ್ಯ ಮಾಧುಸ್ವಾಮಿಯವರು ಕಳುಹಿಸಿಕೊಡಲಿ. ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನನಗೆ ಇರತಕ್ಕಂಥ ಮಾಹಿತಿ ಪ್ರಕಾರ ಅಂಥಾದ್ದು ಏನು ಆಗಿಲ್ಲ ಎನ್ನುವುದು ಅಭಿಪ್ರಾಯ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈ ರ್ಯಾಂಪ್ ಒಂದು ಟೆಂಪೋರರಿ ಅರೇಂಜ್‌ಮೆಂಟ್ ನಾಲೆ ಡೀಪ್ ಕಟ್ ಏನಿರುತ್ತದೆ ಅದರಿಂದ ಮೇಲುಗಡೆ ಮಣ್ಣು ತೆಗೆದು ಹಾಕುವುದಕ್ಕೆ ಅಥವಾ ಡೆಬ್ರೀಸ್ ತೆಗೆದು ಹಾಕುವುದಕ್ಕೆ ಮಾಡುವುದು. ಬಹುಶಃ ಹೇಮಾವತಿ ವಲಯದಲ್ಲಿ ಸುಮಾರು 40 ರಿಂದ 50 ಪರ್ಸೆಂಟ್ ರ್ಯಾಂಪ್‌ಗಳು ಔಟ್‌ಸೈಡ್ ಎಸ್ಟಿಮೇಟ್ ಆಗಿದೆಯೆಂದು ಹೇಳಿ ನಮಗೆ ಇರುವ ಮಾಹಿತಿ. ಸನ್ಮಾನ್ಯ ಸಚಿವರು ಅದರ ಬಗ್ಗೆ ಏನಾದರೂ ವಿಚಾರಣೆ ನಡೆಸಬೇಕಾಗುತ್ತದೆ. ಸುಮ್ಮಸುಮ್ಮನೆ ನಾವು ಇಲ್ಲಿ ಬಂದು ಪ್ರಶ್ನೆಯನ್ನು ಎತ್ತುವುದಕ್ಕೆ ಆಗುವುದಿಲ್ಲ. ಲಿಫ್ಟ್ ಹಾಕಿಕೊಡುತ್ತೀರಿ. ಲೀಡ್ ಹಾಕಿ ಕೊಡುತ್ತೀರಿ? ಆಚೆಯಿಂದ ಮೇಲುಗಡೆ ಮಣ್ಣು ಎತ್ತಿಕೊಂಡು ಹೋಗುತ್ತದೆ ಎಂದು ಆತ ಲಿಫ್ಟ್ ತೆಗೆದುಕೊಂಡು ಅಲ್ಲಿಂದ ಮುಂದಕ್ಕೆ ಇಷ್ಟು ದೂರ ಸಾಗಿಸುತ್ತೇವೆ ಎಂದು ಲೀಡ್ ತೆಗೆದುಕೊಂಡು, ರ್ಯಾಂಪ್‌ನ್ನು ಕೂಡ ನೀವು ಎಸ್ಟಿಮೇಟ್‌ನಲ್ಲಿ ಸೇರಿಸಿದೆ ಇದು ಟೆಂಪೊರರಿಯಾಗಿ ಮಾಡುವಂತಾದ್ದು. ಇದಕ್ಕೆ ಕಾಂಕ್ರೀಟ್ ಸಿಮೆಂಟ್ ಹಾಕುವ ಕೆಲಸವಲ್ಲ. ಇಳಿದು ಹೋಗುವುದಕ್ಕೆ ಮಾಡಿಕೊಳ್ಳುವ ಮೆಟ್ಟಿಲು. ಲಕ್ಷಾಂತರ ರೂಪಾಯಿ ಅಲ್ಲಿ ಖರ್ಚಾಗಿದೆ ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ಇದು ಸತ್ಯವೇ ಎಂದು ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೆ.ಎನ್.ನಾಗೇಗೌಡ: ಅಲ್ಲಿ 315 ಕಿಲೋಮೀಟರ್ ವೇರಿಯಸ್ ಲೆವೆಲ್‌ನಲ್ಲಿ ನಾಲೆಗಳನ್ನು ಮಾಡಿದ್ದೇವೆ. ತುಮಕೂರು, ನಾಗಮಂಗಲ ಎಲ್ಲಾ ಕಡೆ ಮಾಡಿದ್ದೇವೆ. ಈಗ ಅವರು ಹೇಳತಕ್ಕಂಥಾದ್ದು 60 ಪರ್ಸೆಂಟ್ ಎಸ್ಟಿಮೇಟ್ ಬಿಟ್ಟು ಸುಮಾರು 40 ರ್ಯಾಂಪ್‌ನ್ನು ಮಾಡಿ ಅದಕ್ಕೆ ದುಡ್ಡು ತೆಗೆದುಕೊಂಡಿದ್ದಾರೆ ಎನ್ನುವ ಮಾಹಿತಿಯನ್ನು

ಹೇಳಿದ್ದಾರೆ. ಈಗ ಇರತಕ್ಕಂಥ ಮಾಹಿತಿ ಅದಲ್ಲ. ಆದರೆ ತೆಗೆದಿದ್ದರೂ ಸಹ ಅನುಮತಿ ತೆಗೆದುಕೊಂಡು ಮಾಡಿದ್ದಾರೆ ಎಂದು ಇದೆ. ನಾನು ಸೆಕ್ರೆಟರಿಯವರನ್ನು ಕರೆಸಿ ಎಷ್ಟು ರ್‍ಯಾಂಪ್‌ಗಳನ್ನು ಎಸ್ಟಿಮೇಟ್‌ನಲ್ಲಿ ಸೇರಿದೆ? ಎಷ್ಟು ದುಡ್ಡು ತೆಗೆದುಕೊಂಡಿದ್ದಾರೆ? ಎಸ್ಟಿಮೇಟ್ ಇಲ್ಲದೆ ಸೇರಿರತಕ್ಕಂಥಾದ್ದು ಎಷ್ಟು? ಅದಕ್ಕೆ ಅನುಮತಿ ಪಡೆದುಕೊಂಡಿದ್ದಾರಾ? About the above three categories I will get the information and pass it on to the hon'ble Member.

ಶ್ರೀ ಜೆ.ಸಿ.ಮಾಧುಸ್ವಾಮಿ: ಎಸ್ಟಿಮೇಟ್ ಎಂದರೆ ಎರಡು ವಿಧ, ನಾಲೆ ಆಳ ಮಾಡುವಾಗ ಸೇರಿಸಿ ಎಸ್ಟಿಮೇಟ್ ಮಾಡಿದರೆ ನಮ್ಮದೇನೂ ತಕರಾರು ಇಲ್ಲ. ಅದಾದಮೇಲೆ ರ್‍ಯಾಂಪ್‌ಗೆ ಸಪರೇಟ್ ಎಸ್ಟಿಮೇಟ್ ಮಾಡಿರುವುದನ್ನು ತಾವು ಬೇರೆ ರೀತಿಯಾಗಿ ಪರಿಗಣಿಸಬೇಕು. ಹೌದು, ನಿಮ್ಮವೆರಲ್ಲಾ ಎಸ್ಟಿಮೇಟ್ ಮಾಡಿ ಪೇಮೆಂಟ್ ಮಾಡುವುದು. ಅದು ತಿಳಿಯದಂತಹ ಶಾಸಕ ನಾನಲ್ಲ. ಆ ಕೆಲಸ ಆರಂಭ ಆಗುವುದಕ್ಕೆ ಮೊದಲೇ ಇಷ್ಟು ಅಡಿ ಆಳದಲ್ಲಿ ಆ ನಾಲೆ ಹೋಗುತ್ತದೆ, ಅದಕ್ಕೆ ರ್‍ಯಾಂಪ್ ಅನ್ನು ಇಷ್ಟು ಎಂದು ಪ್ರಾವಿಷನ್‌ನ್ನು ಮೊದಲು ಮಾಡಿದ್ದಾರೆ ಅಥವಾ ಆಮೇಲೆ ಮಾಡಿದ್ದಾರೆ. ಪ್ರಶ್ನೆ ಇದು.

SRI K.N.NAGEGOWDA:- That is what I said, supposing it is not included in the estimate, ಎಕ್ಸ್‌ಕ್ಲೂಡಿಂಗ್ ಎಸ್ಟಿಮೇಟ್‌ನಲ್ಲಿ ಇದ್ದರೆ ಆ ರೀತಿ ಅನುಮತಿ ತೆಗೆದುಕೊಳ್ಳದೆ ಮಾಡಿದ್ದರೆ definitely I will ask the Secretary to verify.

ಚೇರ್‌ಮನ್: ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು. ಈಗ ತಡೆಹಿಡಿಯಲಾದ ಪ್ರಶ್ನೆಗಳು.

ತಡೆಹಿಡಿಯಲಾದ ಪ್ರಶ್ನೆಗಳು

ವಿಷಯ: ಮಂತ್ರಿಗಳ ವಿದೇಶ ಪ್ರವಾಸ

254 (2109)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ),
ಶ್ರೀ.ಹೆಚ್.ಡಿ.ಬಸವರಾಜ್ (ವಿರಾಜ್‌ಪೇಟೆ),
ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ),
ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?